3. ಗಿರಿಗಾಂ - ಜೈನಾಪುರ
4. ಜಂಬಗಿ - ಬಿ.ಕೆ. ಜಂಬಗಿ
5. ಬಿದರಿ-ಬಬಲಾದಿ - ಮುಂಡಗನೂರ
6. ಕನಕವಾಡಿ - ಗುಹೇಶ್ವರ ನಡುಗಡ್ಡೆ
7. ಶುರಪಾಲಿ - ಕಡಕೊಳ

ಕೇಂದ್ರ ಸರ್ಕಾರದ ಅನುದಾನ ದೊರೆತೊಡನೆ ಯಾಂತ್ರಿಕ ದೋಣಿಯ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಮಟ್ಟದ ಕುಸಿತ

1138 (1345) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅಂತರ್ಜಲ ಮಟ್ಟ ಕುಸಿಯಲು ಕಾರಣ ತಿಳಿಸುವಿರಾ ?

ಇ) ಅಂತರ್ಜಲ ಮಟ್ಟ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಈ) ಅಂತರ್ಜಲ ಮಟ್ಟ ಕುಸಿದು ಕಪ್ಪು ಮತ್ತು ಬೂದು ಪ್ರದೇಶಗಳು ಯಾವುವು ; (ಜಿಲ್ಲಾವಾರು ವಿವರ ನೀಡುವುದು) ?

ಉ) ಬಿಜಾಪುರ ಜಿಲ್ಲೆಯಲ್ಲಿ ಗುರುತಿಸಲ್ಪಡುವ ಕಪ್ಪು ಮತ್ತು ಬೂದು ಪ್ರದೇಶಗಳಾವುವು ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಬಂದಿದೆ.

ಆ) ರಾಜ್ಯದಾದ್ಯಂತ ನೀರಾವರಿಗಾಗಿ ಹಾಗೂ ಕುಡಿಯುವ ನೀರಿಗಾಗಿ ಹೆಚ್ಚು ಆಳದ ಕೊಳವೆ ಬಾವಿಗಳನ್ನು ಎಲ್ಲೆಂದರಲ್ಲಿ ಗೊತ್ತುಗುರಿ ಇಲ್ಲದೆ ಕೊರೆದು, ಭೂಮಿಯ ಅಂತರಾಳದಲ್ಲಿರುವ ಜಲ ಭಂಡಾರವನ್ನು ಯಥೇಚ್ಛವಾಗಿ ಬಳಕೆ ಮಾಡುತ್ತಿರುವುದರಿಂದ ಅಂತರ್ಜಲ ಮಟ್ಟವು ಕುಸಿಯುತ್ತಿರುವುದಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಬರಗಾಲದಿಂದ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದಲೂ ಅಂತರ್ಜಲ ವೃದ್ಧಿಯಾಗದೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ.

ಇ) ರಾಜ್ಯದಾದ್ಯಂತ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಸಾಧ್ಯವಾದ ಮಟ್ಟಿಗೆ ತಡೆಗಟ್ಟಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ಪ್ರಾಯೋಗಿಕವಾಗಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಜಲಸಂಪನ್ಮೂಲ ಕ್ರೋಢೀಕರಣ ಯೋಜನೆ ಅಂತರ್ಜಲ ಭಾಗ (Water Resources Consolidation Project, Ground water component) ಯೋಜನೆಯಡಿಯಲ್ಲಿ ಹಂತ ಹಂತವಾಗಿ 5 ವರ್ಷಗಳ ಅವಧಿಯಲ್ಲಿ 58 ತಾಲ್ಲೂಕುಗಳಲ್ಲಿ 50.221 ಸಂಖ್ಯೆಯ ವಿವಿಧ ರಚನೆಗಳನ್ನು ನಿರ್ಮಾಣ ಮಾಡಲು ಕ್ರಿಯಾ ಯೋಜನೆಯನ್ನು ರೂಪಿಸಿ ಪ್ರಸ್ತಾವನೆಯನ್ನು ಆರ್ಥಿಕ ನೆರವಿಗಾಗಿ ವಿಶ್ವಬ್ಯಾಂಕಿಗೆ ಸಲ್ಲಿಸಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ರೂ. 471.00 ಕೋಟಿಗಳಾಗಿದೆ. ಈ ಪ್ರಸ್ತಾವನೆಯು ವಿಶ್ವಬ್ಯಾಂಕಿನ ಪರಿಶೀಲನೆಯಲ್ಲಿದೆ.

ಈ) ರಾಜ್ಯದಲ್ಲಿ 21 ತಾಲ್ಲೂಕುಗಳನ್ನು ಕಪ್ಪು ಮತ್ತು 22 ತಾಲ್ಲೂಕುಗಳನ್ನು ಬೂದು ಪ್ರದೇಶಗಳೆಂದು ವರ್ಗೀಕರಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ಬಿಜಾಪುರ ಜಿಲ್ಲೆಯಲ್ಲಿ ಇಂಡಿ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ಮತ್ತು ಬಿಜಾಪುರ ಹಾಗೂ ಬಸವನಬಾಗೇವಾಡಿ ತಾಲ್ಲೂಕುಗಳನ್ನು ಬೂದು ಪ್ರದೇಶಗಳೆಂದು ವರ್ಗೀಕರಣ ಮಾಡಲಾಗಿದೆ.

ಅನುಬಂಧ - 1

ಕ್ಲಿಷ್ಟಕರವೆಂದು ಪರಿಗಣಿಸಲಾದ ತಾಲ್ಲೂಕುಗಳಲ್ಲಿ ಅಂತರ್ಜಲ ಅಭಿವೃದ್ಧಿಯ ಸ್ಥಾನ-ಮಾನ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬೂದು ತಾಲ್ಲೂಕು	ಕಪ್ಪು ತಾಲ್ಲೂಕು	ಷರಾ
1	ಬೆಂಗಳೂರು ನಗರ		ಆನೇಕಲ್ಲು ಬೆಂಗಳೂರು ಉತ್ತರ ಬೆಂಗಳೂರು ದಕ್ಷಿಣ	
2	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ ರಾಮನಗರ	ಚನ್ನಪಟ್ಟಣ ದೇವನಹಳ್ಳಿ ಹೊಸಕೋಟೆ	
3	ಬೆಳಗಾಂ	ಅಥಣಿ ಬೈಲಹೊಂಗಲ	ಚಿಕ್ಕೋಡಿ ಹುಕ್ಕೇರಿ	
4	ಬಳ್ಳಾರಿ	ಹಗರಿಬೊಮ್ಮನಹಳ್ಳಿ		
5	ಬೀದರ	ಬೀದರ		
6	ಬಿಜಾಪುರ	ಬಾಗೇವಾಡಿ ಬಿಜಾಪುರ	ಇಂಡಿ	
8	ಚಿತ್ರದುರ್ಗ	ಚಳ್ಳಕೆರೆ ಚಿತ್ರದುರ್ಗ		
9	ದಕ್ಷಿಣ ಕನ್ನಡ	ಬೆಳ್ತಂಗಡಿ	ಬಂಟ್ವಾಳ ಸುಳ್ಯ	
10	ಹಾಸನ	ಅರಸೀಕೆರೆ	ಚನ್ನರಾಯಪಟ್ಟಣ	
11	ಕೋಲಾರ	ಚಿಂತಾಮಣಿ ಗೌರಿಬಿದನೂರು ಮುಳಬಾಗಿಲು ಶಿಡ್ಲಘಟ್ಟ ಶ್ರೀನಿವಾಸಪುರ	ಚಿಕ್ಕಬಳ್ಳಾಪುರ ಕೋಲಾರ ಮಾಲೂರು	
12	ಚಾಮರಾಜನಗರ	ಚಾಮರಾಜನಗರ	ಕೊಳ್ಳೇಗಾಲ	
13	ಕೊಪ್ಪಳ	ಕುಷ್ಟಗಿ		

14	ತುಮಕೂರು	ಕೊರಟಗೆರೆ	ಗುಬ್ಬಿ
		ಕುಣಿಗಲ್ಲು	ಮಧುಗಿರಿ
		ಶಿರಾ	ತಿಪಟೂರು
			ತುಮಕೂರು
			ತುರೇವೆಕೆರೆ
ಒಟ್ಟು		22	21

ರಾಜ್ಯದಲ್ಲಿ ಗೋಶಾಲೆಗಳ ಪ್ರಾರಂಭ

1139 (1473) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲ ಸಂಭವಿಸಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಬರಗಾಲ ಉದ್ಭವಿಸಿದೆ ?

ಇ) ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ ಇರುವ ಜಾನುವಾರುಗಳ ಸಂಖ್ಯೆ ಎಷ್ಟು ?

ಈ) ಸರಕಾರ ಈ ಜಾನುವಾರುಗಳ ಸಂರಕ್ಷಣೆಗಾಗಿ (ಬರಗಾಲದಿಂದಾಗಿ) ಗೋಶಾಲೆಗಳನ್ನು ತೆರಿದಿದೆಯೇ ?

ಉ) ಹಾಗಾದರೆ ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಗೋಶಾಲೆಗಳನ್ನು ಆರಂಭಿಸಲಾಗಿದೆ ?

ಊ) ಗೋಶಾಲೆಗಳನ್ನು ಆರಂಭಿಸದೇ ಇದ್ದಲ್ಲಿ ಸರಕಾರ ರಾಜ್ಯದ ಪ್ರತಿ ಹೋಬಳಿ ಪ್ರದೇಶಕ್ಕೆ ಒಂದರಂತೆ ಗೋಶಾಲೆ ತೆಗೆಯಲು ಏನು ಕ್ರಮ ಕೈಗೊಂಡಿದೆ ?

ಋ) ಗೋಶಾಲೆಗಳನ್ನು ಯಾವ ಕಾಲಮಿತಿಯಲ್ಲಿ ತೆರೆಯಲಾಗುವುದು ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಹೌದು.

ಆ) 25 ಜಿಲ್ಲೆಗಳಲ್ಲಿ ಉದ್ಭವಿಸಿದೆ - ಪಟ್ಟಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಇ) ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಈ) ಹೌದು

ಉ) ಗದಗ ಜಿಲ್ಲೆಯ 3 ಪ್ರದೇಶಗಳಲ್ಲಿ ಪ್ರಾರಂಭಿಸಲಾಗಿದೆ.

ಊ) ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಅವಶ್ಯಕತೆ ಯನ್ವಯ ಗೋಶಾಲೆ ತೆರೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಋ) (ಊ)ರಲ್ಲಿ ಮಾಹಿತಿ ನೀಡಲಾಗಿದೆ.

ಅನುಬಂಧ - 1

List of districts - Dentered as drought affected

Sl No.	Name of the Districts
1	2
1	Bangalore (U)